ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ	75
ಸದಸ್ಯರ ಹೆಸರು	ಶ್ರೀ. ಆರ್.ಧರ್ಮಸೇನ
ಉತ್ತರಿಸುವ ದಿನಾಂಕ	15.07.2019
ಉತ್ತರಿಸುವ ಸಚಿವರು	ಮಾನ್ಯ ಕೃಷಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕೃಷಿ ಭಾಗ್ಯ ಯೋಜನೆಯಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳು ಯಾವವು ; ಈ ಯೋಜನೆಗೆ ಇದುವರೆಗೂ ಎಷ್ಟು ಹಣ ವೆಚ್ಚ ಮಾಡಲಾಗಿದೆ.	ಕೃಷಿ ಭಾಗ್ಯ ಯೋಜನೆಯಡಿ ಮಳೆ ನೀರು ಸಂಗ್ರಹಣೆ ಹಾಗೂ ಸಂರಕ್ಷಿತ ನೀರಾವರಿಗೆ ಒತ್ತು ನೀಡಲಾಗಿದ್ದು, ರೈತರಿಗೆ 2014-15ನೇ ಸಾಲಿನಿಂದ 2016-17 ನೇ ಸಾಲಿನವರೆಗೆ ಬದು ನಿರ್ಮಾಣ, ಕೃಷಿ ಹೊಂಡ ನಿರ್ಮಾಣ, ಪಾಲಿಥೀನ್ ಹೊದಿಕೆ/ಪರ್ಯಾಯ ಮಾದರಿ ಅಳವಡಿಕೆ, ಲಘು ನೀರಾವರಿ ಘಟಕ (ಹನಿ/ತುಂತುರು ನೀರಾವರಿ) , ಡೀಸಲ್ ಪಂಪ್ ಸೆಟ್, ಬೆಳೆ ಪದ್ಧತಿ ಪ್ರಾತ್ಯಕ್ಷತೆ, ನೆರಳು ಪರದೆ (shade net), ಪಶುಸಂಗೋಪನಾ ಚಟುವಟಿಕೆಗಳು (ಐಚ್ಛಿಕ) ಹಾಗೂ ಪಾಲಿಹೌಸ್/ನೆರಳು ಪರದೆ (shade net) ಘಟಕಗಳ ಸೌಲಭ್ಯಗಳನ್ನು ನೀಡಲಾಗಿದೆ. 2017-18 ರಿಂದ 2019-20 ರವರೆಗೆ ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡ, ಪಾಲಿಥೀನ್ ಹೊದಿಕೆ/ಪರ್ಯಾಯ ಮಾದರಿ ಅಳವಡಿಕೆ, ಡೀಸಲ್ ಪಂಪ್ ಸೆಟ್, ಲಘು ನೀರಾವರಿ (ಹನಿ/ತುಂತುರು ನೀರಾವರಿ) ಘಟಕಗಳನ್ನು ಹಾಗೂ ಕೃಷಿ ಹೊಂಡದ ಸುತ್ತಲೂ ನೆರಳು ಪರದೆ (shade net) ಘಟಕಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. 2014-15 ರಿಂದ 2019-20ನೇ ಸಾಲಿನ ಜೂನ್ ಮಾಹೆಯ ಅಂತ್ಯದವರೆಗೆ ರೂ.2453.84 ಕೋಟಿ ಹಣವನ್ನು ವೆಚ್ಚ ಮಾಡಲಾಗಿದೆ.
ಆ)	ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆ ಯಾಗಿರುವ ಅನುದಾನ ಎಷ್ಟು?	ಕೃಷಿ ಭಾಗ್ಯ ಯೋಜನೆಯು ರಾಜ್ಯ ವಲಯ ಯೋಜನೆಯಾಗಿದ್ದು, 2014-15 ನೇ ಸಾಲಿನಿಂದ ಜೂನ್-2019 ರ ಅಂತ್ಯದವರೆಗೆ ರೂ.2511.80 ಕೋಟಿ ಅನುದಾನ ಸಂಪೂರ್ಣವಾಗಿ ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿದೆ.
ಇ)	ಈ ಯೋಜನೆಯಡಿಯಲ್ಲಿ ಯಾವ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಪ್ರೋತ್ಸಾಹ ನೀಡಲು ಉದ್ದೇಶಿಸಲಾಗಿದೆ; ಈವರೆಗೆ ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಈ ಯೋಜನೆ ಯನ್ನು ಅನುಷ್ಠಾನ ಗೊಳಿಸಲಾಗಿದೆ?	ಕೃಷಿ ಭಾಗ್ಯ ಯೋಜನೆಯನ್ನು ಮಳೆಯಾಶ್ರಿತ ಕೃಷಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಮಳೆ ನೀರಿನ ನಿರ್ವಹಣೆಗೆ ಆದ್ಯತೆ ನೀಡಿ ರೂಪಿಸಲಾಗಿದೆ. ಮಳೆಯಾಶ್ರಿತ ಕೃಷಿಯಲ್ಲಿ ಮಳೆ ನೀರಿನ ಸಂಗ್ರಹಣೆ ಮತ್ತು ಸಂದಿಗ್ಧ ಹಂತಗಳಲ್ಲಿ ಹಾಗೂ ಮಧ್ಯಂತರ ಒಣ ಅವಧಿಯಲ್ಲಿ ಸಂರಕ್ಷಿತ ನೀರಾವರಿ ಒದಗಿಸಿ ಉತ್ಪಾದಕತೆಯನ್ನು ಹೆಚ್ಚಿಸುವುದು ಯೋಜನೆಯ ಉದ್ದೇಶವಾಗಿದೆ. ನೀರು ಸಂಗ್ರಹಣೆಗಾಗಿ ಕೃಷಿ ಹೊಂಡ, ನೀರು ಇಂಗದಂತೆ ತಡೆಯಲು ಪಾಲಿಥೀನ್ /ಪರ್ಯಾಯ ಮಾದರಿ

		ಹೊದಿಕೆ, ಹೊಂಡದಿಂದ ನೀರು ಎತ್ತಲು ಡೀಸಲ್ ಪಂಪ್ ಸೆಟ್, ನೀರನ್ನು ಬೆಳೆಗೆ ಹಾಯಿಸಲು ಲಘು ನೀರಾವರಿ ಘಟಕಗಳನ್ನು ಹಾಗೂ ಕೃಷಿ ಹೊಂಡದ ನೀರು ಆವಿಯಾಗುವುದನ್ನು ತಡೆಯಲು ಮತ್ತು ಆಕಸ್ಮಿಕ ಅವಘಡಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೃಷಿ ಹೊಂಡದ ಸುತ್ತಲೂ ನೆರಳು ಪರದೆ ಘಟಕಗಳಿಗೆ ಸಹಾಯಧನ ನೀಡಲಾಗುತ್ತಿದೆ. ಇದಲ್ಲದೇ ವಿಶೇಷ ಪ್ಯಾಕೇಜ್ ಅಡಿ ಕೊಳವೆ ಬಾವಿ ಮರುಪೂರ್ಣ ಘಟಕವೂ ಸೇರಿದಂತೆ ಸಹಾಯಧನ ನೀಡಲಾಗುತ್ತಿದೆ. ಇದುವರೆಗೂ 2.65 ಲಕ್ಷಗಳ ಕೃಷಿ ಹೊಂಡ ನಿರ್ಮಾಣ ಮಾಡಲಾಗಿದ್ದು, 5.67 ಲಕ್ಷ ಹೆಕ್ಟರ್ ಪ್ರದೇಶದಲ್ಲಿ ಇರುವ ಬೆಳೆಗೆ ಸಂದಿಗ್ಧ ಹಂತದಲ್ಲಿ ತೇವಾಂಶ ಕೊರತೆಯಿಂದ ಬೆಳೆ ನಷ್ಟ ತಪ್ಪಿಸಲು ನೀರನ್ನು ಒದಗಿಸಿ ಅನುಷ್ಠಾನಗೊಳಿಸಲಾಗಿದೆ.

ಸಂಖ್ಯೆ:AGRI-ACT/55/2019

(ಎನ್.ಹೆಚ್.ಶಿವಶಂಕರರೆಡ್ಡಿ)
ಮಾನ್ಯ ಕೃಷಿ ಸಚಿವರು